

**ಎಡದಿಂದ ಬಲಕ್ಕೆ:**

1. ಸಂಬಂಧವನ್ನು ಸರಿಪಡಿಸಲು ತಕ್ಕ ಒಡಂಬಡಿಕೆ ಆಯಿತು (3)
3. ಅಧ್ಯಯನ ವರದಿಯಿಂದ ಬಂದ ಲಾಭ ಏನು? (3)
4. ಆತನ ಸ್ವಾಮಿತ್ವದ ಪ್ರಭಾವ ಅನಂತವೇನಲ್ಲ (3)
6. ಸಾರಥಿಯಾಗುವ ಅರ್ಹತೆ ಇದೆಯೇ ಗೊತ್ತು ಮಾಡು (4)
7. ಮೂರೂ ಕಲ್ಲುಗಳು ಈಗ ಚೂರು ಚೂರು (4)
9. ಪ್ರಥಮ ನಿರೂಪಣೆಗೆ ಸರಿಸಾಟಿ ಇಲ್ಲ ಬಿಡಿ (4)
11. ಹೊಸ ಹವೆಯ ಜೊತೆ ಬದುಕು ಹೇಗೆ? (4)
15. ಥತ್ ಎಂದು ತಿರಸ್ಕರಿಸಿದ್ದರ ಪರಿಣಾಮ ಇದು (3)
16. ಹಿರಿಮೆ ಏನೆಂದರೆ ಆತ ರಾಮನ ಜೊತೆಗಾರ (3)
17. ಏಣಿಯನ್ನು ಕ್ಷಣದಲ್ಲೇ ಮಾಯ ಮಾಡಿದ ಇಂದ್ರಜಾಲ (3)

**ಮೇಲಿಂದ ಕೆಳಕ್ಕೆ:**

1. ಸಂಕಟದ ಸಮಯದಲ್ಲಿ ಬೇಕೇ ಬೇಕು ತಾಳ್ಮೆ (3)
2. ಸೇಬಿನ ತೋಟ ಸಿಕ್ಕಿದ್ದು ಒಳ್ಳೇ 'ಹಣೆ ಬರಹ' (3)
3. ಔತಣ ನೀಡಬೇಕೆಂಬ ಆಜ್ಞೆಯೇ ಬಂದಿದೆ (3)
5. ತೇರಿನ ತೋರಣಕ್ಕೆ ಬೇಕಾದದ್ದು ಚಿಗುರೆಲೆ (3)
6. ಇದು ಗಮನ ಸೆಳೆವ ತಂತ್ರವೇ ಎಂಬ ಸಂದೇಹ (3)
8. ಯಾರಿಗಾದರೂ ಸಲ್ಲುವಂತಹ ಪ್ರಶ್ನೆ ತಲೆಕೆಳಗು (3)
10. ಪರತತ್ವ ತಿಳಿದೂ ಪರಾಜಯಗೊಂಡವ ಈತ (3)
12. ಹಾಗೆ ಹುಕುಂ ನೀಡಿದವ ಯುನಾನಿ ವೈದ್ಯ ತಾನೇ? (3)
13. ನ್ಯಾಯಾಲಯದಲ್ಲೇ ಅಲ್ಲೊಂದು ಮನೆ ಕೂಡ (3)
14. ಧಣಿಯಾದರೇನು? ಅವನಿಗೂ ಇದೇ ಭೂಮಿಯೇ ನೆಲೆ (3)

---

### ಪದಬಂಧ 5-7-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಪಲಾಯನ; 3. ಪರಾರಿ; 4. ಮೂಷಿಕ; 6. ನೆರೆಭಯ; 7. ಸುರಿಸಪ ('ಪಸರಿಸು' ಹಿಂದು ಮುಂದು); 9. ಲತಾಗೃಹ; 12. ಸಾಧಾರಣ; 14. ಕಡತ; 15. ವಾಚಕ; 16. ರಕ್ತದಾನಿ.

**ಮೇಲಿಂದ ಕೆಳಕ್ಕೆ:**

1. ಪರಿಣಯ; 2. ನಮೂದಿಸು; 3. ಪಹರೆ; 5. ಕಳಸ; 6. ನೆಲಬಲ; 8. ಪರಿಮಾಣ; 10. ತಾರಕ; 11. ಹಸ್ತಾಂತರ; 12. ಸಾಗವಾನಿ; 13. ರಜಕ.

# ಪ್ರಶ್ನಾಂಕಣ

## ಕುಂಜ ಪಕ್ಷಿ - ಏನು ವಿಶೇಷ?

ಸುಂದರ, ಕಲಾಮಯ 'ಕುಂಜ' ನಿರ್ಮಿಸುವ ಅದ್ಭುತ ಕೌಶಲ್ಯವೇ ಈ ಪಕ್ಷಿಯ ಪ್ರಥಮ ಪರಮ ವೈಶಿಷ್ಟ್ಯ. ಅದಕ್ಕೇ ಈ ಹಕ್ಕಿಗೆ ಈ ಹೆಸರು ಕೂಡ. ಕಾಗೆಗಳ ಸಂಬಂಧಗಳಾದ, ತೀರಾ ಸಾದಾ ರೂಪದ, ಹಾಡುಗಾರರಲ್ಲದ ಈ ಹಕ್ಕಿಗಳಲ್ಲಿ ಇಪ್ಪತ್ತು ಪ್ರಭೇದಗಳಿವೆ. ಪ್ರತಿ ಪ್ರಭೇದವೂ ಅದರದ್ದೇ ವಿಶಿಷ್ಟ ಶೈಲಿಯ, ವಿಭಿನ್ನ ವಿನ್ಯಾಸದ, ಆಕರ್ಷಕ ಅಲಂಕರಣದ 'ಕುಂಜ'ವನ್ನು ನಿರ್ಮಿಸುತ್ತದೆ. ಈ ಎಲ್ಲ ಪ್ರಭೇದಗಳೂ ನ್ಯೂಗಿನಿಯಲ್ಲಿ ಮತ್ತು ಆಸ್ಟ್ರೇಲಿಯಾದ ಈಶಾನ್ಯ ಭಾಗದ ವೃಷ್ಟಿವನ ಪ್ರದೇಶಗಳಿಗೇ ಸೀಮಿತ.

ಮತ್ತೊಂದು ವಿಶೇಷ ಏನೆಂದರೆ ಕುಂಜ ನಿರ್ಮಿಸುವ ಈ ಅದ್ಭುತ ಕೌಶಲ್ಯ 'ಗಂಡು ಹಕ್ಕಿ'ಗಳಿಗೆ ಮಾತ್ರ ಸೀಮಿತ, ಕರಗತ. ಹಾಗೆಂದರೆ ಕುಂಜ ನಿರ್ಮಾಣ ಪ್ರಣಯ ಸಂಬಂಧೀ ವಿದ್ಯಮಾನ ಎಂಬುದು ಸ್ಪಷ್ಟ. ವಾಸ್ತವ ಏನೆಂದರೆ ಪ್ರಣಯ ಕಾಲದಲ್ಲಿ ಪ್ರತಿಯೊಂದು ಗಂಡು ವಯಸ್ಕ ಕುಂಜ ಪಕ್ಷಿಯೂ ಹೆಣ್ಣು ಹಕ್ಕಿಗಳನ್ನು ಆಕರ್ಷಿಸಲು, ಅವುಗಳ ಮನ ಗೆಲ್ಲಲು ತಾನು ವಾಸಿಸುವ ವೃಷ್ಟಿವನದ ನೆಲದ ಮೇಲೆ ಅಲಂಕೃತವಾದ, ವರ್ಣಮಯವಾದ, ವಿಧ ವಿಧ ವಸ್ತು ಸಂಗ್ರಹಿತವಾದ 'ಪ್ರಣಯ ಮಂದಿರ'ವೊಂದನ್ನು ನಿರ್ಮಿಸುತ್ತದೆ. ಅದರಲ್ಲೂ ಒಂದೇ ಪ್ರದೇಶದ, ಒಂದೇ ಪ್ರಭೇದದ ಗಂಡುಗಳು ಅಲ್ಲಲ್ಲೇ ಹತ್ತಿರ ಹತ್ತಿರದಲ್ಲೇ ರಚಿಸುವ ಇಂಥ ಕುಂಜಗಳು ಪ್ರದರ್ಶನ ಸ್ಪರ್ಧೆಗೆ ಸಜ್ಜುಗೊಳಿಸಿದ ಕಲಾಕೃತಿಗಳಂತೆ, ಭಿನ್ನ ಭಿನ್ನ ಅದ್ಭುತ ಅಲಂಕೃತ 'ಸ್ವಯಂವರ ಮಂಟಪ'ಗಳಂತೆ ಕಂಗೊಳಿಸುತ್ತವೆ.



ಗೂಡಿನಂತೆ, ಗುಡಿಸಿಲಿನಂತೆ, ಕಂಬದಂತೆ, ಕಮಾನು ಕೋಣೆಯಂತೆ... ಹಾಗೆ ವಿಧ ವಿಧ ರೀತಿಗಳಲ್ಲಿ ನಿರ್ಮಾಣಗೊಳ್ಳುವ ಈ ಕುಂಜಗಳ ಮುಂಭಾಗದಲ್ಲಿ ಅಥವಾ ಸುತ್ತಲೂ ಒಂದು 'ಉದ್ಯಾನ'ವೂ ಇರುತ್ತದೆ. ಕಡ್ಡಿಗಳಿಂದ, ಬಳ್ಳಿಗಳಿಂದ ರಚನೆಗೊಳ್ಳುವ ಮಂಟಪಗಳನ್ನು ಈ ಹಲ್ಲಿಗಳು ತಮ್ಮದೇ ಇಷ್ಟದ ವಸ್ತುಗಳಿಂದ ಸಿಂಗಾರಗೊಳಿಸುತ್ತವೆ: 'ಎಲೆಗಳು, ಹೂವುಗಳು, ಹಣ್ಣುಗಳು, ಮೂಳೆ ಚೂರುಗಳು. ಮೃದ್ವಂಗಿ ಚಿಪ್ಪುಗಳು, ಕಲ್ಲುಗಳು... ಇತ್ಯಾದಿ' ಬಳ್ಳಿಗಳನ್ನು ತೂಗಾಡಿಸಿ, ಹೂಗಳನ್ನು ಮುಡಿಸಿ, ಹಣ್ಣು-ಕಾಯಿ ಸಿಕ್ಕಿಸಿ... ಹಾಗೆಲ್ಲ ಕುಂಜವನ್ನು ಚೆಂದಗೊಳಿಸುತ್ತವೆ. ಇತರ ವಸ್ತು ಸಂಗ್ರಹವನ್ನು ಕುಂಜದ ಮುಂದಿನ ಉದ್ಯಾನದಲ್ಲಿ ಜೋಡಿಸುತ್ತವೆ.

ಇಷ್ಟೆಲ್ಲ ಆದ ನಂತರ ಗಂಡು ಹಕ್ಕಿ ಬಗೆ ಬಗೆಯ ದನಿ ತೆಗೆದು ಹೆಣ್ಣನ್ನು 'ಕರೆ'ಯತೊಡಗುತ್ತದೆ. ಅದಕ್ಕೆ ಮನಕೊಡುವ ಹೆಣ್ಣು ಹಾರಿಬಂದು ನೆಲಕ್ಕಿಳಿದು ಕುಂಜವನ್ನು ಪರೀಕ್ಷಿಸುತ್ತದೆ. ವಿನ್ಯಾಸ ಅಲಂಕರಣ ಎಲ್ಲ ಒಪ್ಪಿಗೆಯಾದರೆ ಮಂಟಪವನ್ನು ಪ್ರವೇಶಿಸುತ್ತದೆ. ಗಂಡನ್ನು ವರಿಸುತ್ತದೆ. ಇಂಥ ಸಂಕೀರ್ಣ ಪ್ರಣಯ-ಪರಿಣಯ ಕಾರ್ಯಕ್ರಮವೇ ಕುಂಜ ಪಕ್ಷಿಗಳ ವೈಶಿಷ್ಟ್ಯ.

■ ಎನ್. ವಾಸುದೇವ್